2018 ಕ.ತೀ.ವ 859

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

## ಎನ್. ಜಯರಾಂ ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ, ಸರ್ಕಾರಿ ವಕೀಲರಿಂದ ಪ್ರತಿನಿಧಿತ ಮತ್ತು ಇನ್ನೊಬ್ಬರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ರಿಟ್ ಅರ್ಜಿ.

ಬೆಳಗಾವಿಯ ಸತ್ರ ನ್ಯಾಯಾಲಯಗಳ ಕಡತದ ಮೇಲಿನ ಪಿಸಿ 4/2016ರಲ್ಲಿನ 1 ರಿಂದ 7 ರ ವರೆಗಿನ ಆಪಾದಿತರು, ಮೇಲೆ ಹೇಳಿದ ಖಾಸಗಿ ಫಿರ್ಯಾದನ್ನು ರದ್ದುಪಡಿಸಲು ಕೋರಿ ಈ ಎರಡೂ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಕ್ರಿಮಿನಲ್ ಅರ್ಜಿ 100744/2016ನ್ನು 1 ರಿಂದ 6ರ ವರೆಗಿನ ಆಪಾದಿತರು ಸಲ್ಲಿಸಿದ್ದು, ಕ್ರಿಮಿನಲ್ ಅರ್ಜಿ 100814/2016ನ್ನು ಆಪಾದಿತ ಸಂಖ್ಯೆ 7 ಸಲ್ಲಿಸಿರುತ್ತಾರೆ. ಎರಡೂ ಕ್ರಿಮಿನಲ್ ಅರ್ಜಿಗಳಲ್ಲಿನ ಎರಡನೇ ಪ್ರತ್ಯರ್ಜಿದಾರರು ಪಿ.ಸಿ. 4/2016ರಲ್ಲಿನ ಫಿರ್ಯಾದುದಾರರಾಗಿರುತ್ತಾರೆ.

ಫಿರ್ಯಾದುದಾರ ಹಾಗೂ ಆತನ ಕುಟುಂಬದ ಸದಸ್ಯರು, ರಾಜ್ಯ ಸರ್ಕಾರದ ಅಧಿಕಾರಿಗಳು ಅದರಲ್ಲೂ ನಿರ್ದಿಷ್ಟವಾಗಿ ಬೆಳಗಾವಿಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಹಾಗೂ ಬೆಳಗಾವಿಯ ಪೋಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ವಿವಿಧ ಹಂತದಲ್ಲಿ ತಮ್ಮ ತಮ್ಮ ಕರ್ತವ್ಯ ನಿರ್ವಹಿಸುವಾಗ ದಬ್ಬಾಳಿಕೆಗೆ ಒಳಗಾಗಿರುತ್ತೇವೆಂಬುದು ಫಿರ್ಯಾದಿನ ಸಾರಾಂಶವಾಗಿರುತ್ತದೆ. ಈತನ ಪ್ರಕಾರ ಈತನ ಜಾತಿಯೇ ಕಿರುಕುಳಕ್ಕೆ ಕಾರಣವಾಗಿರುತ್ತದೆ.

ಫಿರ್ಯಾದುದಾರನು ಮಾಡಿದ ಆಪಾದನೆಯು ಸುಳ್ಳು ಆಪಾದನೆಯಾಗಿದ್ದಲ್ಲಿ, ಈತನೂ ಕೂಡ ತತ್ಪರಿಣಾಮಗಳಿಗೆ ಸಮಾನ ಹೊಣೆಗಾರನಾಗಿರುತ್ತಾನೆಂದು ವಿಶೇಷವಾಗಿ

*ಕ್ರಿಮಿನಲ್ ಅರ್ಜಿ ಸಂಖ್ಯೆ: 100744/2016 ಇದರೊಂದಿಗೆ ಇತರೆ, ದಿನಾಂಕ: 12ನೇ ಜನವರಿ, 2017.

ಹೇಳಬೇಕಾದ ಅವಶ್ಯಕತೆಯಿರುವುದಿಲ್ಲ. ಇದಕ್ಕೆ ಪ್ರತಿಯಾಗಿ ಪಿ.ಸಿ.4/2016ರಲ್ಲಿನ ಆಪಾದಿತ ಸಂ.1 ರಿಂದ 6ರ ವರೆಗಿನ ಆಪಾದಿತರು/ಇಲ್ಲಿನ 1 ರಿಂದ 6 ರ ವರೆಗಿನ ಅರ್ಜಿದಾರರ ವಿರುದ್ಧ ಆತ ಆಪಾದನೆಯನ್ನು ಮಾಡಿದ್ದಲ್ಲಿ, ತರುವಾಯ ತುಳಿತಕ್ಕೊಳಗಾದ ವರ್ಗ ಅದರಲ್ಲೂ ನಿರ್ದಿಷ್ಟವಾಗಿ ಯಾವ ವರ್ಗದ ಜನರನ್ನು ಸಂರಕ್ಷಿಸಲು ಸರ್ಕಾರವು ವಿಶೇಷ ಶಾಸನಗಳನ್ನು ರೂಪಿಸಿರುವುದೂ ಅಂಥ ಜನರ ವಿರುದ್ಧ ಸರ್ಕಾರಿ ನೌಕರರು ಗಂಭೀರ ಸ್ವರೂಪದಲ್ಲಿ ತೊಂದರೆ ನೀಡಬಾರದ್ದಾಗಿದ್ದು, ನೌಕರರು, ತಮ್ಮ ಜಾತಿಯ ಶ್ರೀಮಂತ ರಾಜಕಾರಣಿಗಳ ಬೆಂಬಲದಲ್ಲಿ ಅವರನ್ನು ಗುರಿಯಾಗಿಸುವುದು ಮೇಲ್ನೋಟಕ್ಕೆ ಸರಿಯಾದುದೆಂದು ರುಜುವಾತಾದಲ್ಲಿ ಅದು ಸಮರ್ಥನೀಯವಾಗಿರುವುದಿಲ್ಲ.

ವಿಷಯದ ಈ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಸದರಿ ಫಿರ್ಯಾದಿನಲ್ಲಿನ 1 ರಿಂದ 6ರ ವರೆಗಿನ ಆಪಾದಿತರ ವಿರುದ್ಧ ಪಿ.ಸಿ.4/2016ರಲ್ಲಿನ ಖಾಸಗಿ ದೂರಿನಲ್ಲಿ ಮಾಡಿದ ಆಪಾದನೆ ಕುರಿತಂತೆ ತನಿಖೆ ನಡೆಸುವುದು ಯುಕ್ತವಾದುದು ಹಾಗೂ ನ್ಯಾಯಯುತವಾದುದು ಎಂದು ಅಭಿಪ್ರಾಯಪಡುತ್ತದೆ.

ಈಗ ಪಿ.ಸಿ.4/2016ರಲ್ಲಿನ ಆಪಾದಿತ ಸಂಖ್ಯೆ.7ರ ವಿರುದ್ಧ ದೂರನ್ನು ಗಮನಿಸುವುದಾದರೆ, ಅರ್ಜಿದಾರರ ಪರ ಮಾನ್ಯ ವಕೀಲರ ಪ್ರಕಾರ ಕ್ರಿಮಿನಲ್ ಅರ್ಜಿ 100814/2016ರಲ್ಲಿನ ಪ್ರಸ್ತಾಪಿಸಲ್ಪಟ್ಟಂಥ ಸ್ಥಳೀಯ ವೃತ್ತಪತ್ರಿಕೆಯ ಹೆಸರಾಂತ ಪ್ರಕಟಣಕಾರರ ಮೇಲೆ ಭಾರತ ದಂಡ ಸಂಹಿತೆಯ 500ನೇ ಪ್ರಕರಣದಡಿಯಲ್ಲಿ ಆಪಾದಿತ ಸಂ.7ರವರ ವಿರುದ್ಧದ ಅಪರಾಧವು ಸಂಜ್ಞೇಯ ಅಪರಾಧವಾಗಿರುತ್ತದೆ. ಆದ್ದರಿಂದ, ಆತನ ವಿರುದ್ಧ ತನಿಖೆಗೆ ಆದೇಶವನ್ನು ಹೊರಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆತನ ಪ್ರಕಾರ, ಯುಕ್ತ ಸಾಕ್ಷ್ಯಾಧಾರ ದೊರಕಿದಲ್ಲಿ, ನ್ಯಾಯಾಲಯವು ಸಂಜ್ಞೇಯಕ್ಕೆ ತೆಗೆದುಕೊಳ್ಳಬಹುದು ಅಥವಾ ಆರಂಭದಲ್ಲಿಯೂ ದೂರನ್ನು ವಜಾಗೊಳಿಸಲೂಬಹುದು. ಆ ಸಂಬಂಧದಲ್ಲಿ ಇವರು *(2013) 3 ಎಸ್‌ಸಿಸಿ 697ರಲ್ಲಿ ವರದಿಯಾದ ಗಂಭೀರ ಸಿಂಗ್ ಆರ್. ಡೆಖರೆ –ವಿರುದ್ಧ– ಪಾಲ್ಗುಣಿಬಾಯಿ ಚಿಮನ್‌ಬಾಯಿ ಪಟೇಲ್* ಮತ್ತು ಮತ್ತೊಬ್ಬರು ಪ್ರಕರಣವನ್ನು ಉದಾಹರಿಸಿರುತ್ತಾನೆ. ಮುಂದುವರೆದು, ಆಪಾದಿತ ಸಂ.7, ಪಿ.ಸಿ.4/2016ರಲ್ಲಿ ಹೇಳಿದಂತೆ ಪ್ರಕಟಣಕಾರರೂ ಆಗಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ. ಆದಾಗ್ಯೂ, ಈ ನ್ಯಾಯಾಲಯವು

**ಪಿಸಿ.4/2016ರಲ್ಲಿ ಯಾರೇ ಆಪಾದಿತರ ವಿರುದ್ಧ ಕ್ರಿಮಿನಲ್ ದೂರನ್ನು ನೋಂದಾಯಿಸಿರುವುದನ್ನು ಈ ನ್ಯಾಯಾಲಯವು ಪರಿಗಣಿಸಿರುವುದಿಲ್ಲ. ತನಿಖೆ ನಡೆಸಬೇಕಾದ ಅಗತ್ಯತೆ ಇದೆಯೋ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ. ತನಿಖೆಯಲ್ಲಿ, ಆಪಾದಿತ ಸಂಖ್ಯೆ.7 ವಿಜಯವಾಣಿ ಪ್ರಕಟಣಕಾರರನ್ನು ಹೊರತುಪಡಿಸಿದ ಯಾರೇ ವ್ಯಕ್ತಿಯಾಗಿದ್ದಾರೆಂದು ಕಂಡುಬಂದಲ್ಲಿ, ತನಿಖೆಯ ತರುವಾಯ ಅಂತಿಮ ವರದಿಯನ್ನು ಸಲ್ಲಿಸುವಲ್ಲಿ ಅವಶ್ಯಕ ಪಕ್ಷಕಾರನೆಂದು ಆ ವ್ಯಕ್ತಿಯ ಮೇಲೆ ಆಪಾದನೆ ಹೊರಿಸಲು ತನಿಖಾಧಿಕಾರಿಗಳು ಮುಕ್ತರಾಗಿರುತ್ತಾರೆ. ವಿಷಯದ ಈ ಹಿನ್ನೆಲೆಯಲ್ಲಿ ಪಿ.ಸಿ.4/2016ರಲ್ಲಿ ಆಪಾದಿತ ಸಂ.7 ಆಗಿರುವಂಥ ಪ್ರಕರಣಾಕಾರರ ಮೇಲೂ ತನಿಖೆಯನ್ನು ನಿರ್ದೇಶಿಸುವಲ್ಲಿ ಮಾನ್ಯ ಸತ್ರ ನ್ಯಾಯಾಲಯದ ನ್ಯಾಯಾಧೀಶರ ಆದೇಶದೊಂದಿಗೆ ಮಧ್ಯೆ ಪ್ರವೇಶಿಸಿರುವ ಯಾವುದೇ ಆಧಾರವಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.**

**ಮೇಲಿನ ಅಭಿಪ್ರಾಯಗಳೊಂದಿಗೆ, ಪಿ.ಸಿ.4/2016ರಲ್ಲಿನ 1 ರಿಂದ 7ರ ವರೆಗಿನ ಆಪಾದಿತರಿಂದ ಸಲ್ಲಿಸಿದ ಈ ಕ್ರಿಮಿನಲ್ ಅರ್ಜಿಗಳನ್ನು ವಜಾಮಾಡಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

1. *(2015) 6 ಎಸ್‌ಸಿಸಿ 287*
   *ಪ್ರಿಯಾಂಕ ಶ್ರೀವಾತ್ಸವ್ ಹಾಗೂ ಮತ್ತೊಬ್ಬರು*
   *–ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಹಾಗೂ ಇತರರು (ಉಲ್ಲೇ) 16*
2. *(2013) 3 ಎಸ್‌ಸಿಸಿ 697*
   *ಗಂಭೀರಸಿಂಗ್ ಆರ್ ಡೀಕರೆ –ವಿರುದ್ಧ–*
   *ಪಾಲ್ಗುಣಿಬಾಯಿ ಚಿಮನ್‌ಬಾಯಿ ಪಟೇಲ್*
   *ಮತ್ತು ಇನ್ನೊಬ್ಬರು (ಉಲ್ಲೇ) 22*

ಅರ್ಜಿದಾರರ ಪರ: ಶ್ರೀ ಕೆ.ಎಲ್. ಪಾಟೀಲ್, ವಕೀಲರು;
1ನೇ ಪ್ರತ್ಯರ್ಜಿದಾರರ ಪರ: ಶ್ರೀ ರಾಜ ರಾಘವೇಂದ್ರ ನಾಯಕ್, ಹೆಚ್‌ಸಿಜಿಪಿ.
ಶ್ರೀ ಡಿ.ಟಿ. ಶೇರ್‌ಖಾನ್, ಪಾರ್ಟಿ ಇನ್ ಪರ್ಸನ್

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ಬೆಳಗಾವಿಯ ಸತ್ರ ನ್ಯಾಯಾಲಯಗಳ ಕಡತದ ಮೇಲಿನ ಪಿಸಿ 4/2016ರಲ್ಲಿನ 1 ರಿಂದ 7 ರ ವರೆಗಿನ ಆಪಾದಿತರು, ಮೇಲೆ ಹೇಳಿದ ಖಾಸಗಿ ಫಿರ್ಯಾದನ್ನು ರದ್ದುಪಡಿಸಲು ಕೋರಿ ಈ ಎರಡೂ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಕ್ರಿಮಿನಲ್ ಅರ್ಜಿ 100744/2016ನ್ನು 1 ರಿಂದ 6ರ ವರೆಗಿನ ಆಪಾದಿತರು ಸಲ್ಲಿಸಿದ್ದು, ಕ್ರಿಮಿನಲ್ ಅರ್ಜಿ 100814/2016ನ್ನು ಆಪಾದಿತ ಸಂಖ್ಯೆ 7 ಸಲ್ಲಿಸಿರುತ್ತಾರೆ. ಎರಡೂ ಕ್ರಿಮಿನಲ್ ಅರ್ಜಿಗಳಲ್ಲಿನ ಎರಡನೇ ಪ್ರತ್ಯರ್ಜಿದಾರರು ಪಿ.ಸಿ. 4/2016ರಲ್ಲಿನ ಫಿರ್ಯಾದುದಾರರಾಗಿರುತ್ತಾರೆ.

2. ಫಿರ್ಯಾದುದಾರ ಹಾಗೂ ಆತನ ಕುಟುಂಬದ ಸದಸ್ಯರು, ರಾಜ್ಯ ಸರ್ಕಾರದ ಅಧಿಕಾರಿಗಳು ಅದರಲ್ಲೂ ನಿರ್ದಿಷ್ಟವಾಗಿ ಬೆಳಗಾವಿಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಹಾಗೂ ಬೆಳಗಾವಿಯ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ವಿವಿಧ ಹಂತದಲ್ಲಿ ತಮ್ಮ ತಮ್ಮ ಕರ್ತವ್ಯ ನಿರ್ವಹಿಸುವಾಗ ದಬ್ಬಾಳಿಕೆಗೆ ಒಳಗಾಗಿರುತ್ತೇವೆಂಬುದು ಫಿರ್ಯಾದಿನ ಸಾರಾಂಶವಾಗಿರುತ್ತದೆ. ಈತನ ಪ್ರಕಾರ ಈತನ ಜಾತಿಯೇ ಕಿರುಕುಳಕ್ಕೆ ಕಾರಣವಾಗಿರುತ್ತದೆ.

3. ಫಿರ್ಯಾದುದಾರನು, ಬೆಳಗಾವಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಎದುರು ಈ ಮುಂದೆ ಪಿ.ಸಿ.1/2016ರಲ್ಲಿ ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತೇನೆಂದು ಹೇಳಿರುತ್ತಾನೆ. ಅದರಲ್ಲಿ, ಮಾನ್ಯ ಜಿಲ್ಲಾ ನ್ಯಾಯಾಧೀಶರು ದೂರನ್ನು ದಾಖಲಿಸಿಕೊಂಡ ತರುವಾಯ ಬೆಳಗಾವಿಯ ಪೊಲೀಸ್ ಆಯುಕ್ತರಿಗೆ ತನಿಖೆ ಮಾಡಲು ವಿಷಯವನ್ನು ನಿರ್ದೇಶಿಸಿರುತ್ತಾರೆ. ಸದರಿ ಖಾಸಗಿ ಫಿರ್ಯಾದು ಬೆಳಗಾವಿಯ ಪೊಲೀಸ್ ಉಪ–ಆಯುಕ್ತರು ಹಾಗೂ ಬೆಳಗಾವಿಯ ಪೊಲೀಸ್ ಸೂಪರಿನ್‌ಟೆಂಡೆಂಟರು ಅಂದರೆ, ಎನ್. ಜಯರಾಂ ಹಾಗೂ ಬಿ.ಆರ್. ರವಿಕಾಂತೇಗೌಡರ ವಿರುದ್ಧ ಹೂಡಿದುದಾಗಿರುತ್ತದೆ. ಆ ತರುವಾಯ, ಪೊಲೀಸ್ ಇಲಾಖೆಯಲ್ಲಿನ ನೌಕರರು ತನ್ನ ಗುಂಪು ಕಟ್ಟಿಕೊಂಡು,

ತನ್ನ ವಿರುದ್ಧ ಸುಳ್ಳು ಪ್ರಕರಣಗಳನ್ನು ನೋಂದಾಯಿಸಿ ಕಿರುಕುಳ ನೀಡಿ, ಕ್ರಿಮಿನಲ್ ಪ್ರಕರಣಗಳಲ್ಲಿ ತಾನು ಭಾಗಿಯಾಗಿರುತ್ತೆನೆಂದು ಮಾಧ್ಯಮಗಳಲ್ಲಿ ಪ್ರಚಾರ ನೀಡಲು ಕಾರಣರಾಗಿರುತ್ತಾರೆಯೆಂದು ಹೇಳಿರುತ್ತಾನೆ.

4. ಅಲ್ಲದೆ, ಫಿರ್ಯಾದುದಾರನು, ಕೆಲವು ಅರ್ಜಿದಾರರು ತನ್ನ ಹೆಸರನ್ನು ರೌಡಿ ಪಟ್ಟಿಯಲ್ಲಿ ಸೇರಿಸಿ, ಕರ್ನಾಟಕ ಕಳ್ಳಭಟ್ಟಿದಾರರ, ಔಷಧ ನಿಯಮಗಳನ್ನು ಉಲ್ಲಂಘಿಸುವವರ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಸಂಬಂಧಿ ಅಪರಾಧಗಳು ಮತ್ತು ಕೊಳಗೇರಿ ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985 (ಸಂಕ್ಷಿಪ್ತವಾಗಿ 'ಗೂಂಡಾ ಅಧಿನಿಯಮ' ಎಂದು ಕರೆಯಲಾಗಿರುತ್ತದೆ) ರಡಿಯಲ್ಲಿ ಆತನ ಹೆಸರನ್ನು ದಾಖಲಿಸಿ, ಒಂದು ತಿಂಗಳಿಗಿಂತ ಹೆಚ್ಚು ಕಾಲ ಸಿವಿಲ್ ಸೆರೆಮನೆಗೆ ಆತನನ್ನು ಕಳುಹಿಸಿರುತ್ತಾರೆಂದು ಸಹ ಹೇಳಿರುತ್ತಾನೆ. ವಾಸ್ತವವಾಗಿ, ಈತ ದಿನಾಂಕ 21.6.2016ರಂದು ಪಿ.ಸಿ. 4/2016ರ 1 ರಿಂದ 5ನೇ ಕಂಡಿಕೆಗಳಲ್ಲಿನ ದೃಢೋಕ್ತಿಗಳಿಂದ ನೋಡಲಾದಂತೆ 1 ರಿಂದ 7ರ ವರೆಗಿನ ಎಲ್ಲಾ ಆಪಾದಿತರ ವಿರುದ್ಧ ನಿರ್ದಿಷ್ಟ ಆಪಾದನೆಯನ್ನು ಮಾಡಿರುತ್ತಾನೆ.

5. ಮುಂದುವರೆದು, ಫಿರ್ಯಾದುದಾರನು ತನ್ನ ವಿರುದ್ಧ ರೌಡಿ ಶೀಟ್ ಅನ್ನು ತೆರೆದು, ತರುವಾಯ ತನ್ನನ್ನು ದಸ್ತಗಿರಿ ಮಾಡಿ, ಒಂದು ತಿಂಗಳಿಗಿಂತ ಹೆಚ್ಚಿನ ಕಾಲ ಗುಲ್ಬರ್ಗಾದಲ್ಲಿ ಪ್ರತಿಬಂಧಕ ಅಭಿರಕ್ಷೆಯಲ್ಲಿನ ಬಂಧನದಲ್ಲಿಟ್ಟಿದ್ದರೆಂದೂ, ಈ ಬಂಧನವು ಕರ್ನಾಟಕ ಉಚ್ಚ ನ್ಯಾಯಾಲಯದ ಮೂವರು ಹಿರಿಯ ನ್ಯಾಯಾಧೀಶರನ್ನು ಒಳಗೊಂಡ ಸಲಹಾ ಸಮಿತಿಯ ಮೂಲಕ ತನ್ನನ್ನು ಕೂಡಲೇ ಬಿಡುಗಡೆಗೊಳಿಸಬೇಕೆಂಬ ನಿರ್ದೇಶನ ಬಂದ ತರುವಾಯ ಮುಕ್ತವಾಯಿತೆಂದು ಹೇಳಿರುತ್ತಾನೆ. ಮುಂದುವರೆದು, ಫಿರ್ಯಾದುದಾರನು, ಇಲ್ಲಿನ ಅರ್ಜಿದಾರರು ತನ್ನನ್ನು ಎನ್‌ಕೌಂಟರ್ ಮಾಡಿ ಜೀವ ತೆಗೆಯುವುದು ಮಾತ್ರವಲ್ಲದೆ, ತನ್ನ ವೃತ್ತಿ ಜೀವನವನ್ನು ಅಳಿಸಿಬಿಡಲು ಪ್ರಯತ್ನಿಸಿರುತ್ತಾರೆಂದೂ ಹೇಳಿರುತ್ತಾನೆ. ಅಲ್ಲದೆ, ಈತ, ಇಲ್ಲಿನ ಅರ್ಜಿದಾರರು ಜಾತಿವಾದಿಗಳಾಗಿದ್ದು, ತುಳಿತಕ್ಕೆ ಒಳಗಾದ ಅದರಲ್ಲೂ ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರ

ಬಗ್ಗೆ ಯಾವುದೇ ಗೌರವ ಹಾಗೂ ಪರಿಗಣನೆಗಳನ್ನು ಇಟ್ಟುಕೊಂಡಿರುವುದಿಲ್ಲವೆಂದೂ ಗುರುತರವಾದ ಆಪಾದನೆ ಮಾಡಿರುತ್ತಾನೆ. ಇವರುಗಳಿಗೆ ದಮನಿತ ವರ್ಗಕ್ಕೆ ಸೇರಿದ ವ್ಯಕ್ತಿಗಳ ವಿರುದ್ಧ ಸುಳ್ಳು ಪ್ರಕರಣಗಳನ್ನು ನೋಂದಾಯಿಸುವ ಹವ್ಯಾಸವಿದ್ದು, ಅವರನ್ನು ಹಿಂಸೆಗೆ ಗುರಿ ಮಾಡುತ್ತಿರುತ್ತಾರೆಂದೂ ಹೇಳಿರುತ್ತಾನೆ.

6. ಫಿರ್ಯಾದುದಾರನು, ಇಲ್ಲಿನ ಅರ್ಜಿದಾರರು ಸರ್ಕಾರಿ ನೌಕರರಾಗಿರುವುದರಿಂದ ಖಾಸಗಿ ದೂರಿನಲ್ಲಿ 1 ರಿಂದ 6ರ ವರೆಗಿನ ಆಪಾದಿತರ ಮೇಲೆ ಕ್ರಮ ಜರುಗಿಸಲು ಅನುಮತಿ ಕೋರಿ ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿರುತ್ತಾರೆಂದೂ ಹಾಗೂ ಇದು ಪರಿಗಣನೆಯಲ್ಲಿದೆಯೆಂದೂ ಹೇಳಿರುತ್ತಾನೆ. ದೂರಿನಲ್ಲಿ, ಧಾರವಾಡ ಜಿಲ್ಲೆಯಲ್ಲಿನ ಹುಬ್ಬಳ್ಳಿಯಲ್ಲಿ ಪ್ರಕಟಣಾ ಕಚೇರಿಯನ್ನು ಹೊಂದಿರುವ ವಾರ್ತಾಪತ್ರಿಕೆಯ ಆಪಾದಿತ ಸಂಖ್ಯೆ–7/ ಪ್ರಕಾಶಕ ರ ವಿರುದ್ಧವೂ ಸಹ ಆಪಾದನೆಯನ್ನು ಮಾಡಲಾಗಿದೆ.

7. ದಿನಾಂಕ 21.6.2016ರಂದು ಸದರಿ ದೂರನ್ನು ದಾಖಲಿಸಿರುವುದು ಕಂಡು ಬಂದಿದೆ. ತರುವಾಯ, ದಿನಾಂಕ 24.6.2016ರಂದು ಮಾನ್ಯ ಮ್ಯಾಜಿಸ್ಟ್ರೇಟರು ಇದನ್ನು ಕೈಗೆತ್ತಿಕೊಂಡಾಗ, ದೂರನ್ನು ಹಾಗೂ ಅದಕ್ಕೆ ಲಗತ್ತಿಸಿದ್ದ ದಸ್ತಾವೇಜುಗಳನ್ನು ಪೂರ್ಣವಾಗಿ ಓದಿದ ತರುವಾಯ, ದೂರಿನೊಂದಿಗೆ, ಹಾಜರುಪಡಿಸಿದ ಪೂರಕ ದಸ್ತಾವೇಜುಗಳ ಹಿನ್ನೆಲೆಯಲ್ಲಿ 1 ರಿಂದ 7ರ ವರೆಗಿನ ಆಪಾದಿತರ ವಿರುದ್ಧ ಅಪರಾಧದ ಗಂಭೀರತೆಯನ್ನು ಪರಾಮರ್ಶಿಸಿ ಫಿರ್ಯಾದುದಾರ ಪರಿಶಿಷ್ಟ ಜಾತಿಗೆ ಸೇರುತ್ತಾನೆಂದು ದೃಢಪಡಿಸುವ ಮೂಲ ಜಾತಿ ಪ್ರಮಾಣಪತ್ರವನ್ನು ಸಲ್ಲಿಸಿದ ತರುವಾಯ ಬೆಳಗಾವಿಯ ಪೋಲೀಸ್ ಆಯುಕ್ತರ ಮೂಲಕ ವಿಚಾರಣೆಯನ್ನು ನಡೆಸಬೇಕೆಂದು ಅಗತ್ಯಪಡಿಸಿ, ಇದನ್ನು ತನಿಖೆಗೆ ನಿರ್ದೇಶಿಸಿರುತ್ತಾರೆ. ಅಧೀನ ನ್ಯಾಯಾಲಯವು, ತನಿಖೆಗೆ ಆದೇಶಿಸಿದಾಗ್ಯೂ, ಸರ್ಕಾರಿ ನೌಕರರ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ಮಂಜೂರಾತಿಯು ದಂಡ ಪ್ರಕ್ರಿಯಾ ಸಂಹಿತೆಯ 197ನೇ ಪ್ರಕರಣದಡಿಯಲ್ಲಿ ಅವಶ್ಯಕವಾಗಿರುತ್ತದೆ. ಅಧೀನ ನ್ಯಾಯಾಲಯವು ಸದರಿ ಆದೇಶವನ್ನು ಹೊರಡಿಸುವಾಗ, 28.10.2016ರಂದು ಬೆಳಗಾವಿ ಪೋಲೀಸ್ ಆಯುಕ್ತರು ವರದಿಯನ್ನು ಸಲ್ಲಿಸಬೇಕೆಂದು ಅಗತ್ಯಪಡಿಸಿ ಅಭಿಪ್ರಾಯ ನೀಡಿರುತ್ತದೆ.

8. ಇಂಥ ಪ್ರಕರಣಗಳಲ್ಲಿ ಸಾಮಾನ್ಯವಾಗಿ ನಿರೀಕ್ಷಿಸಲಾದಂತೆ, ಆಪಾದಿತರು / ಇಲ್ಲಿನ ಅರ್ಜಿದಾರರು, ಎರಡು ಕ್ರಿಮಿನಲ್ ಅರ್ಜಿಗಳನ್ನು ಸಲ್ಲಿಸುವ ಮೂಲಕ ಈ ನ್ಯಾಯಾಲಯಕ್ಕೆ ಕೂಡಲೇ ಧಾವಿಸಿರುತ್ತಾರೆ. ಆರಂಭದಲ್ಲಿ ತನಿಖೆಯ ಆದೇಶಕ್ಕೆ ತಡೆಯಾಜ್ಞೆ ನೀಡಲಾಗಿದ್ದು, ನೋಟೀಸನ್ನು ಆದೇಶಿಸಿರುತ್ತದೆ. ಯುಕ್ತವಾಗಿ ಜಾರಿಗೊಳಿಸಿದ ನೋಟೀಸುಗಳನ್ನು ಅನುಸರಿಸಿ, ಈ ವಿಷಯವನ್ನು ಇಂದು ಅಂಗೀಕರಿಸಲಾಗಿರುತ್ತದೆ. ಅಲ್ಲದೆ, 14.7.2016ರಂದು ನೀಡಿದ್ದ ಕ್ರಿಮಿನಲ್ ಅರ್ಜಿ ಸಂಖ್ಯೆ 100744/2016ರ ಮಧ್ಯಂತರ ತಡೆಯಾಜ್ಞೆಯನ್ನು ಮುಂದಿನ ಸುನಾವಣೆಯವರೆಗೂ ನೀಡಲಾಗಿತ್ತೆಂಬುದನ್ನು ಇಲ್ಲಿ ನಮೂದಿಸುವುದು ತುಂಬಾ ಅವಶ್ಯಕವಾಗಿರುತ್ತದೆ. ಆದಾಗ್ಯೂ, ಈ ನ್ಯಾಯಾಲಯವು ದಿನಾಂಕ 21.11.2016ರಂದು ಈ ವಿಷಯವನ್ನು ಕೈಗೆತ್ತಿಕೊಂಡು ಅರ್ಜಿಯನ್ನು ಪರಿಶೀಲಿಸಿ, ಮಧ್ಯಂತರ ಆದೇಶವನ್ನು ವಿಸ್ತರಿಸಬೇಕಾದ ಅಗತ್ಯವಿರುವೆಡೆ, ಈ ಮೇಲಿನ ನಿರ್ಣಯ ಯುಕ್ತವಾದುದಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಇದಕ್ಕೆ ವಿರುದ್ಧವಾಗಿ, ಈ ನ್ಯಾಯಾಲಯವು, ಈ ವಿಷಯವನ್ನು ಮೂಲೆಗೊತ್ತದೆ, ತ್ವರಿತವಾಗಿ ಒಂದು ತಾರ್ಕಿಕ ಅಂತ್ಯವನ್ನು ತಲುಪಬೇಕೆಂದು ಖಚಿತಪಡಿಸಿಕೊಂಡು ತಕ್ಷಣದ ಪರಿಗಣನೆಯನ್ನು ಅಗತ್ಯಪಡಿಸುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ ಮಧ್ಯಂತರ ಆದೇಶವನ್ನು ವಿಸ್ತರಿಸಲು ಸಾಧ್ಯವಿರುವುದಿಲ್ಲ.

ಆದಾಗ್ಯೂ, ಕ್ರಿಮಿನಲ್ ಅರ್ಜಿ ಸಂಖ್ಯೆ 100814/2016ಗೆ ಸಂಬಂಧಿಸಿದಂತೆ ನಿರ್ದಿಷ್ಟ ಆದೇಶವಿದ್ದು, ಅದರಲ್ಲಿನ ಮಧ್ಯಂತರ ಆದೇಶವು ಮುಂಬರುವ ಆದೇಶದವರೆಗೆ ಇರುತ್ತದೆ. ಆದ್ದರಿಂದ, ಎರಡೂ ವಿಷಯಗಳನ್ನು ಒಟ್ಟಿಗೆ ಪರಿಗಣನೆಗಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ.

9. ಈ ವಿಷಯಗಳನ್ನು ಪರಿಗಣನೆಗಾಗಿ ಕೈಗೆತ್ತಿಕೊಂಡಾಗ, ಕ್ರಿಮಿನಲ್ ಅರ್ಜಿ ಸಂಖ್ಯೆ 100744/2016ರಲ್ಲಿನ ಅರ್ಜಿದಾರರ ಪರ ಮಾನ್ಯ ವಕೀಲರು, ಭಾರತ ದಂಡ ಸಂಹಿತೆಯ 143, 147, 504, 506, 507 ಹಾಗೂ 307ನೇ ಪ್ರಕರಣಗಳ ವ್ಯಾಪ್ತಿಗೆ ಬರುವ ಹಲವಾರು ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಹಾಗೂ ಇತರೆ ಗಂಭೀರ ಪ್ರಕರಣಗಳಿಗೆ ಸಂಬಂಧಿಸಿದಂತೆ

ಪಿಸಿ.4/2016ರಲ್ಲಿನ ಫಿರ್ಯಾದಿಗೆ ಪ್ರತಿಯಾಗಿ ಹಲವಾರು ವ್ಯಾಜ್ಯಗಳು ಇತ್ಯರ್ಥದಲ್ಲಿವೆಯೆಂದು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ಇದರ ಜೊತೆಗೆ, ಕಾಗವಾಡ ಪೊಲೀಸ್‌ರೊಂದಿಗೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದಲ್ಲಿಯಲ್ಲಿ ಶಾಂತಿ ಭಂಗ ಮಾಡಿದ ಕಾರಣಕ್ಕಾಗಿ ಈತನ ವಿರುದ್ಧ ಕ್ರಮ ಜರುಗಿಸಲಾಗಿತ್ತೆಂದೂ ಹೇಳಲಾಗಿರುತ್ತದೆ.

10. ಪಿ.ಸಿ. 4/2016ರಲ್ಲಿನ ಫಿರ್ಯಾದುದಾರನು ಪರಿಶಿಷ್ಟ ಜಾತಿಗೆ ಸೇರಿದ್ದು ಆತ ವಕೀಲರ ವೃತ್ತಿಯನ್ನು ಅನುಸರಿಸುತ್ತಿದ್ದಾಗ್ಯೂ, ಸಮಾಜದ ಹಿತಾಸಕ್ತಿಗೆ ಬಾಧಕವಾಗುವಂಥ ಹಲವಾರು ಚಟುವಟಿಕೆಗಳಲ್ಲಿ ಒಳಗೊಂಡಿದ್ದನೆಂದು ರುಜುವಾತುಪಡಿಸಲು ಮಾನ್ಯ ವಕೀಲರು ಪ್ರಯತ್ನಿಸಿರುತ್ತಾರೆ. ಅರ್ಜಿದಾರರ ಪ್ರಕಾರ, ಫಿರ್ಯಾದುದಾರನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ (ದೌರ್ಜನ್ಯಗಳ ತಡೆ) ಅಧಿನಿಯಮದ ಉಪಬಂಧಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾನೆ ಹಾಗೂ ಇದನ್ನು ಈತನನ್ನು ಬೆಂಬಲಿಸದಂಥ ವ್ಯಕ್ತಿಗಳೊಂದಿಗೆ ವ್ಯವಹರಿಸುವಾಗ ಗುರಾಣಿಯಂತೆ ಬಳಸಿಕೊಂಡಿರುತ್ತಾನೆ. ಅರ್ಜಿದಾರರ ಪರ ಮಾನ್ಯ ವಕೀಲರು, ಕ್ರಿಮಿನಲ್ ಅರ್ಜಿ 100744/2016ರಲ್ಲಿನ ಅರ್ಜಿದಾರರು ಸರ್ಕಾರಿ ನೌಕರರಾಗಿದ್ದು, ಫಿರ್ಯಾದುದಾರನ ಕಾನೂನುಬಾಹಿರ ಚಟುವಟಿಕೆಗಳನ್ನು ಗಮನಕ್ಕೆ ತೆಗೆದುಕೊಂಡು ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಆರಂಭಿಸಿದಾಗ, ಇದರಿಂದ ಬಾಧಿತನಾದ ಈತನು, ಯಾವುದೇ ಹುರುಳಿಲ್ಲದ ಅಥವಾ ಸಮರ್ಥವಲ್ಲದಂಥ ವಿಚಾರವನ್ನು ಪಿ.ಸಿ. 4/2016ರಲ್ಲಿ ಸುಳ್ಳು ದೂರನ್ನು ದಾಖಲಿಸಿರುತ್ತಾನೆಂದು ನಿರ್ದಿಷ್ಟವಾಗಿ ವಾದಿಸಿರುತ್ತಾರೆ.

11. ಈ ವ್ಯವಹರಣೆಗಳಲ್ಲಿ ಎರಡನೇ ಪ್ರತ್ಯರ್ಜಿದಾರನಾಗಿರುವಂಥ ಅಧೀನ ನ್ಯಾಯಾಲಯದ ಎದುರು ಪಕ್ಷಕಾರನು/ಫಿರ್ಯಾದುದಾರನು ಖುದ್ದಾಗಿ ಉತ್ತರಿಸುವಾಗ ಈತ ಬೆಳಗಾವಿ ಜಿಲ್ಲೆಯ, ಅಥಣಿ ತಾಲ್ಲೂಕಿನ ನವಲಿಹಾಲ್ ಗ್ರಾಮ (ಕಿಡಗೇಡಿ)ದ ಖಾಯಂ ನಿವಾಸಿಯೆಂದು ಈ ನ್ಯಾಯಾಲಯದ ಗಮನಕ್ಕೆ ತರಲಾಗಿರುತ್ತದೆ. ಈತ ಸದರಿ ಗ್ರಾಮದಲ್ಲಿ ತನ್ನ ಆರು ಜನ ಸಹೋದರರೊಂದಿಗೆ ವಾಸಿಸುತ್ತಿದ್ದು, ಅವರಲ್ಲಿ, ಮೂವರು ಇವನಿಗಿಂತ ದೊಡ್ಡವರು ಹಾಗೂ ಮೂವರು ಇವನಿಗಿಂತ

ಕಿರಿಯವರಾಗಿದ್ದು, ಅವರೆಲ್ಲಾ ಸಮಾಜದ ಬಾಧಿತ ವರ್ಗಕ್ಕೆ ಸೇರಿರುತ್ತಾರೆ. ಅವರ ಕುಟುಂಬದಲ್ಲಿ, ಈತನೊಬ್ಬನೇ ವಿದ್ಯಾವಂತನಾಗಿದ್ದು, ಉಳಿದವರೆಲ್ಲಾ ಅವರ ಕುಟುಂಬ ಹೊಂದಿರುವ 10 ಎಕರೆವಿಸ್ತೀರ್ಣದ ಜಮೀನಿನಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

12. ಎರಡನೇ ಪ್ರತ್ಯರ್ಜಿದಾರ / ಫಿರ್ಯಾದುದಾರನ ಪ್ರಕಾರ, ಈ ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯನ್ನು ಹೊಂದಿರುವಂಥ ಸ್ಥಳೀಯ ರಾಜಕಾರಣಿಯು ಕೆರೆಯನ್ನು ಅಭಿವೃದ್ಧಿಪಡಿಸುತ್ತಿದ್ದು, ಆ ಉದ್ದೇಶಕ್ಕಾಗಿ ಫಿರ್ಯಾದುದಾರನ ಕುಟುಂಬಕ್ಕೆ ಸೇರಿದ 10 ಎಕರೆಗಳಷ್ಟು ಜಮೀನನ್ನು ಅತಿಕ್ರಮಿಸಲು ಪ್ರಯತ್ನಿಸಿರುತ್ತಾನೆ. ಆತನ ಪ್ರಕಾರ ಅವನ ಜಮೀನನ್ನು ಅತಿಕ್ರಮಿಸಲು ಸ್ಥಳೀಯ ರಾಜಕಾರಣಿ ಮಾಡಿದ ಸದರಿ ಪ್ರಯತ್ನವೇ ಈ ಎಲ್ಲಾ ಕ್ರಿಮಿನಲ್ ವ್ಯವಹರಣೆಗಳಿಗೆ ಮೂಲ ಕಾರಣವಾಗಿರುತ್ತದೆ.

13. ಮೇಲಿನ ಹಿನ್ನೆಲೆಯನ್ನು ಫಿರ್ಯಾದುದಾರನ ಮೂಲಕ ಮಂಡಿಸಿದ್ದಾಗ್ಯೂ, ಇದು ಖಾಸಗಿ ಫಿರ್ಯಾದಿನಲ್ಲಿ ಕಂಡು ಬಂದಿರುವುದಿಲ್ಲ. ಫಿರ್ಯಾದು ಪೋಲೀಸ್ ಅಧಿಕಾರಿಗಳ ವಿರುದ್ಧ ಸಲ್ಲಿಸಿರುವುದರಿಂದ, ತನ್ನ ಗ್ರಾಮದಲ್ಲಿ ತನ್ನ ಹಾಗೂ ಭೂ ಮಾಲೀಕನ ನಡುವೆ ಇತ್ಯರ್ಥದಲ್ಲಿರುವಂಥ ವಿವಾದವು ಪಿ.ಸಿ. 4/2016ನಲ್ಲಿನ ಖಾಸಗಿ ಫಿರ್ಯಾದನ್ನು ಸೇರಿರುವುದಿಲ್ಲವೆಂದು ಆತ ಸಮರ್ಥಿಸಿಕೊಳ್ಳ ಬಹುದಾಗಿರುತ್ತದೆ. ಮುಂದುವರೆದು ಕ್ರಿಮಿನಲ್ ಅರ್ಜಿ 100744/2016ರ 5ನೇ ಪ್ಯಾರಾಗೆ ಉಲ್ಲೇಖಿಸಿದ ಒಂಭತ್ತು ಪ್ರಕರಣಗಳಿಗೆ ಉತ್ತರಿಸುವವಾಗ ಮೇಲಿನ ನಿವೇದನೆಯನ್ನು ಈತ ಮಾಡಿರುತ್ತಾನೆ.

14. ಫಿರ್ಯಾದುದಾರನ ಪ್ರಕಾರ, ತನ್ನ ಗ್ರಾಮದಲ್ಲಿ ಇರುವಂಥ ಸಕ್ಕರೆ ಕಾರ್ಖಾನೆಯ ಅಧ್ಯಕ್ಷನಾಗಿರುವ ಭೂ ಮಾಲೀಕನು ಸರ್ಕಾರಿ ನೌಕರರು ಅಂದರೆ ಖಾಸಗಿ ಫಿರ್ಯಾದಿನಲ್ಲಿನ 1 ರಿಂದ 6ರ ವರೆಗಿನ ಆಪಾದಿತ ಅಧಿಕಾರಿಗಳ ಹಾಗೂ ಇತರೆ ಅಧಿಕಾರಿಗಳ ಪ್ರಭಾವವನ್ನು ಬಳಸಿಕೊಂಡು ತನ್ನ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದು ಇದು 2010ನೇ ವರ್ಷದಿಂದಲೂ ನಡೆಯುತ್ತಲೇ ಇದ್ದು, ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದಡಿಯಲ್ಲಿ ಆತನ ವಿರುದ್ಧ

ನೋಂದಾಯಿಸಿದ ಫಿರ್ಯಾದಿನಲ್ಲಿ ಪರ್ಯಾವಸಾನವಾಗಿದ್ದು, ವಿವಿಧ ಇತರೆ ಅಪರಾಧಗಳನ್ನು ಅಪರಾಧ ಸಂ.78/2010, 127/2012 ಗಳಲ್ಲಿ ಕಾಣಬಹುದಾಗಿದ್ದು, ಪಿಸಿ.4/2016ರಲ್ಲಿ 1 ರಿಂದ 6ರ ವರೆಗಿನ ಆಪಾದಿತರು ಸಲ್ಲಿಸಿದ ಕ್ರಿಮಿನಲ್ ಅರ್ಜಿ 100744/2016ರ 5ನೇ ಪ್ಯಾರಾದಲ್ಲಿ ಇತರೆ ನಡಾವಳಿಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಅಲ್ಲದೆ, ಈತ, ತನ್ನ ವಿರುದ್ಧ ಕೆಲವು ಅಪರಾಧಗಳನ್ನು ಆಪಾದಿಸಿದ ವಿಠಲ್ ಅಪ್ಪಾಸಾಬ್ ಗಾಯಕ್‌ವಾಡ ಹೆಸರಿನ ವ್ಯಕ್ತಿಯ ವಿರುದ್ಧ ಅಪರಾಧ ಸಂಖ್ಯೆ 170/2015ರಲ್ಲಿ ಫಿರ್ಯಾದನ್ನು ತಾನು ಸಲ್ಲಿಸಿದಾಗ, ಪೊಲೀಸರು ಅಪರಾಧ ಸಂಖ್ಯೆ 171/2015ರಲ್ಲಿ ಸದರಿ ವ್ಯಕ್ತಿಯ ಮೂಲಕ ಈತನ ವಿರುದ್ಧ ಪ್ರತಿ ದೂರನ್ನು ನೋಂದಾಯಿಸಿದ್ದು, ಅದರಲ್ಲಿ ಅವರುಗಳು ಕಾನೂನು ಬಾಹಿರವಾಗಿ ಭಾರತ ದಂಡ ಸಂಹಿತೆಯ 307ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಿರುತ್ತಾರೆ. ಅಲ್ಲದೆ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ದಂಡನೀಯವಾಗಬಹುದಾದ ಅಪರಾಧದಲ್ಲಿ ಈತ ಒಳಗೊಂಡಿದ್ದರೆ ಹೇಗೋ ಹಾಗೆ ಸಾರ್ವಜನಿಕರಲ್ಲಿ ಹಾಗೂ ಮಾಧ್ಯಮದಲ್ಲಿ ವ್ಯಾಪಕ ಪ್ರಚಾರವನ್ನು ನೀಡಿರುತ್ತಾರೆ.

15. ಫಿರ್ಯಾದುದಾರನ ಪ್ರಕಾರ ಖಾಸಗಿ ದೂರಿನಲ್ಲಿನ ಆಪದಿತ ಸಂ.7, ಸಮಾಜದಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗಿದ್ದ ವ್ಯಕ್ತಿ, ಫಿರ್ಯಾದುದಾರ ಕೊಲೆ ಮಾಡಿದ ಅಪರಾಧದಿಂದಾಗಿ ಒಂದು ತಿಂಗಳ ಕಾಲ ಸೆರೆಮನೆ ವಾಸದಲ್ಲಿದ್ದನೆಂದು 18.3.2016ರಂದಿನ ತನ್ನ ಪ್ರಕಟಣೆಯಲ್ಲಿ ಪ್ರಕಟಿಸಿದ್ದು, ಇದು ವಾಸ್ತವಿಕವಾಗಿ ಸರಿಯಾದುದಾಗಿರುವುದಿಲ್ಲ. ಈತನ ಪ್ರಕಾರ, ಒಬ್ಬ ಜವಾಬ್ದಾರಿಯುತ ಪ್ರಕಾಶಕನಾಗಿ, ಆಪಾದಿತ ಸಂಖ್ಯೆ.7 ತನ್ನ ವಿರುದ್ಧ ಸದರಿ ಸುಳ್ಳು ಆಪಾದನೆಯನ್ನು ಪ್ರಕಟಿಸುವುದಕ್ಕೆ ಮೊದಲು ದಾಖಲೆಗಳನ್ನು ಪರಿಶೀಲಿಸಬೇಕಿತ್ತು. ಆದರೆ ಹಾಗೆ ಮಾಡದೆ ಸಮಾಜದಲ್ಲಿ ತನ್ನ ವ್ಯಕ್ತಿತ್ವಕ್ಕಿದ್ದ ಘನತೆಗೆ ಕುಂದುಂಟಾಗಿದ್ದು, ಒಬ್ಬ ವ್ಯಕ್ತಿ ವಕೀಲನಾಗಿದ್ದು ಇಂಥ ಹೇಯ ಕಾರ್ಯ ಮಾಡಿರುವನೆಂದು ತನ್ನನ್ನು ಬಿಂಬಿಸಿ, ತನ್ನ ಭವಿಷ್ಯವನ್ನೇ ಹಾಳುಮಾಡಿರುತ್ತಾರೆ. ಆದ್ದರಿಂದ ಮೇಲೆ ಪ್ರಸ್ತಾಪಿಸಿದ ಎಲ್ಲಾ ಅಪರಾಧಗಳನ್ನು ದಂಡನೆಗೆ ಒಳಪಡದೆ ತಪ್ಪಿಸಿಕೊಳ್ಳುವಂತಿಲ್ಲ. ಹಾಗಾಗಿ, ಎಲ್ಲಾ ಆಪಾದಿತರ ವಿರುದ್ಧ ತನಿಖೆ ನಡೆಸಿ, ಪ್ರಕರಣ ದಾಖಲಿಸಿಕೊಳ್ಳಲು ಖಾಸಗಿ ದೂರಿನಲ್ಲಿ ಕೋರಲಾಗಿರುತ್ತದೆ.

16. ಎರಡೂ ಕಡೆಯ ವಾದ ವಿವಾದಗಳನ್ನು, ಅವರು ಉದಾಹರಿಸಿದ ತೀರ್ಪುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿರುತ್ತದೆ. ಮುಂದುವರೆದು, ಕ್ರಿಮಿನಲ್ ಅರ್ಜಿ ಸಂಖ್ಯೆ 100744/2016ರ ಕ್ರಿಮಿನಲ್ ಅರ್ಜಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಮಾನ್ಯ ವಕೀಲರು ಮಾನ್ಯ ಸತ್ರ ನ್ಯಾಯಾಲಯದ ನ್ಯಾಯಾಧೀಶರು ದೂರನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ, ತಮ್ಮ ಚಿತ್ತವನ್ನು ವಿಚಾರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳದೆ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದಡಿಯಲ್ಲಿ ತನಿಖೆಗೆ ಉಲ್ಲೇಖಿಸಿರುತ್ತದೆ. ಆ ಸಂಬಂಧದಲ್ಲಿ ***ಪ್ರಿಯಾಂಕ ಶ್ರೀವಾತ್ಸವ ಹಾಗೂ ಮತ್ತೊಬ್ಬರು –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಹಾಗೂ ಇತರರು*** [1] ವಿಷಯದಲ್ಲಿ ನೀಡಿದ ತೀರ್ಪನ್ನು ಉದಾಹರಿಸಲು ಪ್ರಯತ್ನಿಸಿದ್ದು, ಇದರಲ್ಲಿ, ಈ ಸಂಬಂಧದಲ್ಲಿ ವಿಚಾರಣೆಗೆ ಆದೇಶಿಸುವುದಕ್ಕೆ ಮೊದಲು, ಫಿರ್ಯಾದನ್ನು ಯುಕ್ತವಾಗಿ ನಿಷ್ಕರ್ಷೆಗೆ ಒಳಪಡಿಸಿರಬೇಕಾದ ಅಗತ್ಯತೆಯಿರುತ್ತದೆಯೆಂಬ ರೀತಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಗಳನ್ನು ನೀಡಿರುತ್ತದೆಂದು ವಾದಿಸಿರುತ್ತಾರೆಂದು ಇವರು ಅಭಿಪ್ರಾಯಪಟ್ಟಿರುತ್ತಾರೆ. ಮಾನ್ಯ ಸತ್ರ ನ್ಯಾಯಾಲಯದ ನ್ಯಾಯಾಧೀಶರು ಲಕ್ಷ್ಯಕೊಟ್ಟು ಸದರಿ ವಿಷಯವನ್ನು ಅರಿಯದೆ, ಕೇವಲ ಯಾಂತ್ರಿಕವಾಗಿ ತನಿಖೆಗಾಗಿ ಪ್ರಶ್ನಿತ ಆದೇಶವನ್ನು ಆದೇಶಿಸಿದ್ದು, ಮೇಲಿನ ತೀರ್ಪಿನ ಹಿನ್ನೆಲೆಯಲ್ಲಿ ಸದರಿ ಆದೇಶವನ್ನು ರದ್ದುಪಡಿಸಿ ಫಿರ್ಯಾದನ್ನು ವಜಾಗೊಳಿಸಬೇಕಾದ ಅವಶ್ಯಕತೆಯಿರುತ್ತದೆಂದು ವಾದಿಸಿರುತ್ತಾರೆ.

17. ಅಲ್ಲದೆ ಮಾನ್ಯ ನ್ಯಾಯವಾದಿಗಳು, ಫಿರ್ಯಾದುದಾರನ ದಸ್ತಗಿರಿಯು, ಸದ್ಭಾವನೆಯಿಂದ ಕೂಡಿರುವುದರಿಂದ, 1 ರಿಂದ 6 ರ ವರೆಗಿನ ಆಪಾದಿತರು, ಫಿರ್ಯಾದುದಾರನನ್ನು ದಸ್ತಗಿರಿ ಮಾಡಿದ ತಮ್ಮ ಕ್ರಮ ಹಾಗೂ ಪ್ರತಿಬಂಧಕ ಸ್ಥಾನಬದ್ಧತೆಯಡಿಯಲ್ಲಿ ಆತನನ್ನು ಕಳುಹಿಸಿದ ಕ್ರಮಕ್ಕೆ ಸಂಬಂಧಿಸಿದಂತೆ ಸಂರಕ್ಷಣೆಗೆ ಹಕ್ಕುಳ್ಳವರಾಗಿರುತ್ತಾರೆಂಬುದನ್ನು ನಿರೂಪಿಸುವ ಅಧಿನಿಯಮದ 16ನೇ ಪ್ರಕರಣದ ಉಪಬಂಧಗಳನ್ನು ಕೂಡ ಉದಾಹರಿಸಿರುತ್ತಾರೆ.

1. (2015) 6 ಎಸ್‌ಸಿಸಿ 287

18. ಆದಾಗ್ಯೂ, ಸದರಿ ಉಪಬಂಧವನ್ನು ಗಮನಿಸಿದಾಗ ಸದರಿ ಉಪಬಂಧವು ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನಾತ್ಮಕ ನಡಾವಳಿಗಳನ್ನು ಅಧಿನಿಯಮಕ್ಕನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಅಥವಾ ಯಾರೇ ಅಧಿಕಾರಿಗಳು ಅಥವಾ ಯಾರೇ ವ್ಯಕ್ತಿಯ ವಿರುದ್ಧ ಜರುಗಿಸಲು ಅವಕಾಶ ಕಲ್ಪಿಸಿರುವುದಿಲ್ಲವೆಂಬುದು ಕಂಡು ಬರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ದಾಖಲೆ ಮೇಲಿನ ವಿಚಾರವನ್ನು ಪರಿಶೀಲಿಸಿದಾಗ, ಮಾನ್ಯ ಜಿಲ್ಲಾ ನ್ಯಾಯಾಧೀಶರು ಆದೇಶಿಸಿದಂತೆ ತನಿಖೆಗೆ ಸಂಬಂಧಿಸಿದಂತೆ ಕರೆದಂಥ ಪಿ.ಸಿ.4/2016ರಲ್ಲಿನ 1 ರಿಂದ 6ರ ವರೆಗಿನ ಆಪಾದಿತರ ಕಡೆಯಿಂದ ಉದ್ದೇಶಿತ ಪ್ರಯತ್ನವನ್ನು ಮಾಡಲಾಗಿದೆಯೆಂದು ವಿವರಿಸಲು ಯುಕ್ತವಾಗಿರುವಂಥ ಸಂರಕ್ಷಣಾತ್ಮಕ ಬಂಧನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ಸಲಹಾ ಸಮಿತಿಯ ಮೂಲಕ ಹೊರಡಿಸಿದ ಆದೇಶದಿಂದ ಕಂಡುಬಂದಂತೆ ಆತನ ವಿರುದ್ಧ ಬೇರೆ ಬೇರೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಆರಂಭಿಸಲಾಗಲೀ ಅಥವಾ ಗೂಂಡಾ ಅಧಿನಿಯಮದಡಿಯಲ್ಲಿ ತನ್ನ ಸಂರಕ್ಷಣಾತ್ಮಕ ಬಂಧನಕ್ಕಾಗಲೀ ಯುಕ್ತ ಸಾಕ್ಷ್ಯವಿಲ್ಲದೆ ಫಿರ್ಯಾದುದಾರನನ್ನು ಈಡುಮಾಡುವ ಪ್ರಯತ್ನವಾಗಿದೆಯೆಂದು ಸ್ಪಷ್ಟಪಡಿಸಲು ಸಾಕಷ್ಟು ಸಾಕ್ಷ್ಯವಿದೆಯೆಂದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಆದ್ದರಿಂದ ಮಾನ್ಯ ವಕೀಲರ ಮೇಲಿನ ವಾದಗಳಲ್ಲಿ ಯಾವುದೇ ಹುರುಳಿರುವುದಿಲ್ಲ.

19. ಮುಂದುವರೆದು, ಅರ್ಜಿದಾರರ ಪರ ಮಾನ್ಯ ವಕೀಲರು, ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದ ನಡಾವಳಿಗಳನ್ನು ಆರಂಭಿಸಿದಾಗ ಹಾಗೂ ಇತರೆ ಕ್ರಿಮಿನಲ್ ಪ್ರಕರಣಗಳನ್ನು ಫಿರ್ಯಾದುದಾರನ ವಿರುದ್ಧ ಹೂಡಿದಾಗ 2010ರ ಅವಧಿಯಲ್ಲಿ 1 ರಿಂದ 6ರ ವರೆಗಿನ ಆಪಾದಿತರು ಅಧಿಕಾರಿಗಳಾಗಿರಲಿಲ್ಲವೆಂದು ರುಜುವಾತುಪಡಿಸಲು ಪ್ರಯತ್ನಿಸಿರುತ್ತಾರೆ. ಆದಾಗ್ಯೂ, ಕ್ರಿಮಿನಲ್ ಅರ್ಜಿಯ 5ನೇ ಪ್ಯಾರಾಗೆ ಉಲ್ಲೇಖಿಸದ ಪ್ರಕರಣಗಳಿಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯುವಾಗ ಈ ನ್ಯಾಯಾಲಯದ ಮುಂದೆ ಫಿರ್ಯಾದುದಾರನ ಮೂಲಕ ವಾದಿಸಿದಂತೆ 2010ನೇ ವರ್ಷದಲ್ಲಿ ಸ್ಥಳೀಯ ರಾಜಕಾರಣಿ ಮತ್ತು ಫಿರ್ಯಾದುದಾರ

ಹಾಗೂ ಈತನ ಕುಟುಂಬದ ಸದಸ್ಯರ ನಡುವೆ ವಿವಾದವು ಆರಂಭವಾಯಿತೆಂಬುದನ್ನು ದಾಖಲೆಗಳಿಂದ ಸ್ಪಷ್ಟವಾಗಿ ನೋಡುತ್ತಿದ್ದೇವೆ. ಅದರಲ್ಲಿ ಈತ ಬೆಳಗಾವಿ ಜಿಲ್ಲಾ ಪೊಲೀಸ್ ಅಧಿಕಾರಿಗಳು ಇವನನ್ನು ಹಾಗೂ ಇವರ ಕುಟುಂಬ ವರ್ಗದವರನ್ನು ಗುರಿಯಾಗಿಸಿಕೊಂಡು ಒಂದರ ಮೇಲೆ ಮತ್ತೊಂದರಂತೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಅನ್ನು ಹೂಡುವ ಮೂಲಕ ತಮ್ಮನ್ನು ಮುಗಿಸಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿರುತ್ತಾನೆ. ಅಂಥ ಗಂಭೀರ ಆಪಾದನೆಗಳು ಇರುವಾಗ, ಅವುಗಳನ್ನು ಸುಖಾಸುಮ್ಮನೆ ಬಿಟ್ಟುಬಿಡಲು ಆಗುವುದಿಲ್ಲ. ಪಿ.ಸಿ. 4/2016ರಲ್ಲಿನ ಫಿರ್ಯಾದುದಾರ ಹಾಗೂ 1 ರಿಂದ 6 ರ ವರೆಗಿನ ಆಪಾದಿತರ ನಡುವಿನ ಆರೋಪ ಹಾಗೂ ಪ್ರತ್ಯಾರೋಪಗಳಲ್ಲಿನ ಸತ್ಯವನ್ನು ಬಯಲು ಮಾಡುವುದು ಸರಿಯಾದುದು ಹಾಗೂ ಅವಶ್ಯಕವಾದುದು ಆಗಿರುತ್ತದೆ.

20. ಫಿರ್ಯಾದುದಾರನು ಮಾಡಿದ ಆಪಾದನೆಯು ಸುಳ್ಳು ಆಪಾದನೆಯಾಗಿದ್ದಲ್ಲಿ, ಈತನೂ ಕೂಡ ತತ್ಪರಿಣಾಮಗಳಿಗೆ ಸಮಾನ ಹೊಣೆಗಾರನಾಗಿರುತ್ತಾನೆಂದು ವಿಶೇಷವಾಗಿ ಹೇಳಬೇಕಾದ ಅವಶ್ಯಕತೆಯಿರುವುದಿಲ್ಲ. ಇದಕ್ಕೆ ಪ್ರತಿಯಾಗಿ ಪಿ.ಸಿ.4/ 2016ರಲ್ಲಿನ ಆಪಾದಿತ ಸಂ.1 ರಿಂದ 6ರ ವರೆಗಿನ ಆಪಾದಿತರು/ಇಲ್ಲಿನ 1 ರಿಂದ 6 ರ ವರೆಗಿನ ಅರ್ಜಿದಾರರ ವಿರುದ್ಧ ಆತ ಆಪಾದನೆಯನ್ನು ಮಾಡಿದ್ದಲ್ಲಿ, ತರುವಾಯ ತುಳಿತಕ್ಕೊಳಗಾದ ವರ್ಗ ಅದರಲ್ಲೂ ನಿರ್ದಿಷ್ಟವಾಗಿ ಯಾವ ವರ್ಗದ ಜನರನ್ನು ಸಂರಕ್ಷಿಸಲು ಸರ್ಕಾರವು ವಿಶೇಷ ಶಾಸನಗಳನ್ನು ರೂಪಿಸಿರುವುದೂ ಅಂಥ ಜನರ ವಿರುದ್ಧ ಸರ್ಕಾರಿ ನೌಕರರು ಗಂಭೀರ ಸ್ವರೂಪದಲ್ಲಿ ತೊಂದರೆ ನೀಡಬಾರದ್ದಾಗಿದ್ದು, ನೌಕರರು, ತಮ್ಮ ಜಾತಿಯ ಶ್ರೀಮಂತ ರಾಜಕಾರಣಿಗಳ ಬೆಂಬಲದಲ್ಲಿ ಅವರನ್ನು ಗುರಿಯಾಗಿಸುವುದು ಮೇಲ್ನೋಟಕ್ಕೆ ಸರಿಯಾದುದೆಂದು ರುಜುವಾತಾದಲ್ಲಿ ಅದು ಸಮರ್ಥನೀಯವಾಗಿರುವುದಿಲ್ಲ.

21. ವಿಷಯದ ಈ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಸದರಿ ಫಿರ್ಯಾದಿನಲ್ಲಿನ 1 ರಿಂದ 6ರ ವರೆಗಿನ ಆಪಾದಿತರ ವಿರುದ್ಧ ಪಿ.ಸಿ.4/2016ರಲ್ಲಿನ ಖಾಸಗಿ

ದೂರಿನಲ್ಲಿ ಮಾಡಿದ ಆಪಾದನೆ ಕುರಿತಂತೆ ತನಿಖೆ ನಡೆಸುವುದು ಯುಕ್ತವಾದುದು ಹಾಗೂ ನ್ಯಾಯಯುತವಾದುದು ಎಂದು ಅಭಿಪ್ರಾಯಪಡುತ್ತದೆ.

22. ಈಗ ಪಿ.ಸಿ.4/2016ರಲ್ಲಿನ ಆಪಾದಿತ ಸಂಖ್ಯೆ.7ರ ವಿರುದ್ಧ ದೂರನ್ನು ಗಮನಿಸುವುದಾದರೆ, ಅರ್ಜಿದಾರರ ಪರ ಮಾನ್ಯ ವಕೀಲರ ಪ್ರಕಾರ ಕ್ರಿಮಿನಲ್ ಅರ್ಜಿ 100814/2016ರಲ್ಲಿನ ಪ್ರಸ್ತಾಪಿಸಲ್ಪಟ್ಟಂಥ ಸ್ಥಳೀಯ ವೃತ್ತಪತ್ರಿಕೆಯ ಹೆಸರಾಂತ ಪ್ರಕಟಣಕಾರರ ಮೇಲೆ ಭಾರತ ದಂಡ ಸಂಹಿತೆಯ 500ನೇ ಪ್ರಕರಣದಡಿಯಲ್ಲಿ ಆಪಾದಿತ ಸಂ.7ರವರ ವಿರುದ್ಧದ ಅಪರಾಧವು ಸಂಜ್ಞೇಯ ಅಪರಾಧವಾಗಿರುತ್ತದೆ. ಆದ್ದರಿಂದ, ಆತನ ವಿರುದ್ಧ ತನಿಖೆಗೆ ಆದೇಶವನ್ನು ಹೊರಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆತನ ಪ್ರಕಾರ, ಯುಕ್ತ ಸಾಕ್ಷ್ಯಾಧಾರ ದೊರಕಿದಲ್ಲಿ, ನ್ಯಾಯಾಲಯವು ಸಂಜ್ಞೇಯಕ್ಕೆ ತೆಗೆದುಕೊಳ್ಳಬಹುದು ಅಥವಾ ಆರಂಭದಲ್ಲಿಯೂ ದೂರನ್ನು ವಜಾಗೊಳಿಸಲೂಬಹುದು. ಆ ಸಂಬಂಧದಲ್ಲಿ ಇವರು ***ಗಂಭೀರ ಸಿಂಗ್ ಆರ್. ಡೀಖರೆ –ವಿರುದ್ಧ– ಪಾಲ್ಗುಣಿಬಾಯಿ ಚಿಮನ್‌ಬಾಯಿ ಪಟೇಲ್ ಮತ್ತು ಇತರರು***[2] ಪ್ರಕರಣವನ್ನು ಉದಾಹರಿಸಿರುತ್ತಾನೆ. ಮುಂದುವರೆದು, ಆಪಾದಿತ ಸಂ.7, ಪಿ.ಸಿ.4/2016ರಲ್ಲಿ ಹೇಳಿದಂತೆ ಪ್ರಕಟಣಕಾರರೂ ಆಗಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ. ಆದಾಗ್ಯೂ, ಈ ನ್ಯಾಯಾಲಯವು ಪಿಸಿ.4/2016ರಲ್ಲಿ ಯಾರೇ ಆಪಾದಿತರ ವಿರುದ್ಧ ಕ್ರಿಮಿನಲ್ ದೂರನ್ನು ನೋಂದಾಯಿಸಿರುವುದನ್ನು ಈ ನ್ಯಾಯಾಲಯವು ಪರಿಗಣಿಸಿರುವುದಿಲ್ಲ. ತನಿಖೆ ನಡೆಸಬೇಕಾದ ಅಗತ್ಯತೆ ಇದೆಯೆ ಅಥವಾ ಇಲ್ಲವೆ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ. ತನಿಖೆಯಲ್ಲಿ, ಆಪಾದಿತ ಸಂಖ್ಯೆ.7 ವಿಜಯವಾಣಿ ಪ್ರಕಟಣಕಾರರನ್ನು ಹೊರತುಪಡಿಸಿದ ಯಾರೇ ವ್ಯಕ್ತಿಯಾಗಿದ್ದಾರೆಂದು ಕಂಡುಬಂದಲ್ಲಿ, ತನಿಖೆಯ ತರುವಾಯ ಅಂತಿಮ ವರದಿಯನ್ನು ಸಲ್ಲಿಸುವಲ್ಲಿ ಅವಶ್ಯಕ ಪಕ್ಷಕಾರನೆಂದು ಆ ವ್ಯಕ್ತಿಯ ಮೇಲೆ ಆಪಾದನೆ ಹೊರಿಸಲು ತನಿಖಾಧಿಕಾರಿಗಳು ಮುಕ್ತರಾಗಿರುತ್ತಾರೆ. ವಿಷಯದ ಈ ಹಿನ್ನೆಲೆಯಲ್ಲಿ ಪಿ.ಸಿ.4/

2. (2013) 3 ಎಸ್‌ಸಿಸಿ 697

2016ರಲ್ಲಿ ಆಪಾದಿತ ಸಂ.7 ಆಗಿರುವಂಥ ಪ್ರಕರಣಾಕಾರರ ಮೇಲೂ ತನಿಖೆಯನ್ನು ನಿರ್ದೇಶಿಸುವಲ್ಲಿ ಮಾನ್ಯ ಸತ್ರ ನ್ಯಾಯಾಲಯದ ನ್ಯಾಯಾಧೀಶರ ಆದೇಶದೊಂದಿಗೆ ಮಧ್ಯೆ ಪ್ರವೇಶಿಸಿರುವ ಯಾವುದೇ ಆಧಾರವಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

23. ಮೇಲಿನ ಅಭಿಪ್ರಾಯಗಳೊಂದಿಗೆ, ಪಿ.ಸಿ.4/2016ರಲ್ಲಿನ 1 ರಿಂದ 7ರ ವರೆಗಿನ ಆಪಾದಿತರಿಂದ ಸಲ್ಲಿಸಿದ ಈ ಕ್ರಿಮಿನಲ್ ಅರ್ಜಿಗಳನ್ನು ವಜಾಮಾಡಲಾಗಿದೆ. ಕ್ರಿಮಿನಲ್ ಅರ್ಜಿ 100744/2016ರಲ್ಲಿನ ಹೆಚ್ಚುವರಿ ದಸ್ತಾವೇಜುಗಳನ್ನು ಸಲ್ಲಿಸಲು ಕೋರಿ ಸಲ್ಲಿಸಿದ ಐ.ಎ.2/2016, ಕ್ರಿಮಿನಲ್ ಅರ್ಜಿಗಳನ್ನು ವಜಾ ಮಾಡಿರುವುದರಿಂದ ಪರಿಗಣನೆಗಾಗಿ ಊರ್ಜಿತವಾಗಿರುವುದಿಲ್ಲ.